(177)

Founded 1917 SATYAVADI Oldest Newspaper of Mysore Daily & Weekly Reg No. M 1299

ಸಂಪುಟ 26 ಸಂಚಿಕೆ 288 ] ಶುಕ್ರವಾರ 23—4—1943 [ 3 ಪೈ

# ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್ ರೂಲ್ ೨೬ ಬಿದ್ದುಹೋಯಿತು

ಫೆಡರಲ್ ಕೋರ್ಟ್ ಛೀಫ್ ಜಸ್ಟಿಸರಾದ ಸರ್ ಮಾರಿಸ್ ಗಯರ ವರು ಮುಂಬೈ ಕೇಶವ ತಲಸಾಡೆಯವರನ್ನು ಬಂಧಿಸಿದ ವಿಷಯದಲ್ಲಿ ಅವರ ಅರ್ಜಿ ಮೇಲೆ ಹೀಗೆ ತೀರ್ಪು ಕೊಟ್ಟಿರುವರು.— ಸರಿಯಾದ ಕೋರ್ಟು ವಾರಂಟಿಲ್ಲದೆ ಯಾರನ್ನೂ ಬಾಧಿಸಕೂಡದು, ಎಂದು.

ಇಂಡಿಯಾದ ಆಕ್ಟಿಂಗ್ ಕೋರ್ಟಿನ ತೀರ್ಮಾನವು ಆಗಿರುವುದರಿಂದ ಈಗ ಬಂಧನದಲ್ಲಿರುವ ಗಾಂಧೀಜಿ ಮೊದಲಾದ 8000 ಮಂದಿಯು ಬಿಡುಗಡೆಯಾಗುವರೆಂದು ಕೋರುತ್ತೇವೆ. ಈ ಜಡ್ಜ್‌ಮೆಂಟಿನ ಪೂರ್ತಾ ವಿವರವು ನಾಳೆಯ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

# ಯುದ್ಧವಾರ್ತೆ

ಫೆಸಿಫಿಕ್‌ನಲ್ಲಿರುವ ನವರದ್ವೀಪ, ನೂವನೂವ ಕಿಸ್ಕ ಇಲ್ಲಿ ಅಮೆರಿಕಾದ ವಿಮಾನಗಳು ಧಾಳಿಪಡಿಸಿ ನವರದಲ್ಲಿ 5 ಶತ್ರು ವಿಮಾನಗಳನ್ನು ನೀರಿನ ಪಾಲುಮಾಡಿದವು.

ಟ್ಯುನಿಸಿಯಾದಲ್ಲಿ ಎಲ್ ಫಿಡ್‌ವಿಲ್ ಉತ್ತರದಲ್ಲಿ ಘೋರವಾದ ಕದನವಾಗುತ್ತಿದೆ. ಕರಕ್ಕೂ ಹಳ್ಳಿಯನ್ನು ಬ್ರಿಟಿಷರು ಹಿಡಿದರು. ನೂರಾರು ಜರ್ಮನರು ಹತರಾದರು.

ನೇಪಲ್ಸನ್ನು ಆರ್. ಎ ಎಫ್. ವಿಮಾನಗಳು ಮತ್ತೆ ಧಾಳಿಮಾಡಿದುವು.

ಮೆಡಿಟ್ ವಲ್ ಬಾದಿಂದ ಡ್ಯೂನಿಸ್‌ಗೆ ಮಧ್ಯ ಭಯಂಕರವಾದ ಕದನವಾಗುತ್ತಿದೆ. ವಿಮಾನ ಚಟುವಟಿಕೆಯೇ ಹೆಚ್ಚು

ರಷಾದಲ್ಲಿ ಜರ್ಮನರು ವಿಷವಾಯು ಪ್ರಯೋಗಮಾಡಲು ಸಿದ್ಧತೆ ಮಾಡುತ್ತಿದ್ದಾರೆಂದೂ ಜಿನೀವ ಕ್ರಮಕ್ಕೆ ವಿರುದ್ಧ ಪ್ರಕಾರ ಹಾಗೆ ಉಪಯೋಗಿಸಿದಲ್ಲಿ ತಾವು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುತ್ತೇವೆಂದು ವಿ॥ ಚರ್ಚಿಲ್ಲರು ಹೇಳಿದರು. ಇದಕ್ಕೆ ಜರ್ಮನಿಯು ತನ್ನ ರೇಡಿಯೋದಲ್ಲಿ 28 ವರ್ಷದಿಂದ ತಾನಿಂದಿಗೂ ವಿಷವಾಯು ಪ್ರಯೋಗಮಾಡಿಲ್ಲ ಇತರರು ಉಪಯೋಗಿಸಿದರೆ ತಾನೂ ಉಪಯೋಗಿಸುವುದೆಂದು ಹೇಳಿತು.

ಸಯಾಂ ರಾಜಧಾನಿಯಾದ ಬಾಂಗ್‌ಕಾಕ್ ಮೇಲೆ ಭಾರಿ ಭಾರಿ ವಿಮಾನಗಳನ್ನು ಅಮೆರಿಕಾದವರು ಇರಿಡಿಯಾದಿಂದ ತೆಗೆದುಕೊಂಡು ಹೋಗಿ ಧಾಳಿಮಾಡಿದರು. ಈ ರೇವಿನ ಮೇಲೆ ಧಾಳಿಮಾಡಿದ್ದು 3 ನೇ ಆವೃತ್ತಿ. ಇದೇ ಕಾಲದಲ್ಲಿ ರಂಗೂನ್, ಮೆಯಿಮೊ, ಉತ್ತರ ಬರ್ಮಾ ಈ ಸ್ಥಳಗಳಲ್ಲಿ ಧಾಳಿ ನಡೆಸಿರುತ್ತಾರೆ ವದ್ದು ಗುಂಡಿನ ಉಗ್ರಾಣಗಳನ್ನೂ, ರೈಲ್ವೆ ರಸ್ತೆಯನ್ನೂ ನಷ್ಟಪಡಿಸಿದರು

## ವಿವಿಧ ವರ್ತಮಾನ

ಬ್ರಿಟಿಷರ ಒಂದು ಪಡೆ ಮೆರಿನು ನೀರಿನ ಪಾಲಾಯಿತು. ಇದು ತನ್ನ ಜೀವಿತ ಕಾಲದಲ್ಲಿ ಶತ್ರುಗಳಿಗೆ ತುಂಬಾ ಕಿರುಕುಳ ಕೊಟ್ಟು, ವಿಶೇಷ ನಷ್ಟ ಮಾಡಿ ಪ್ರಖ್ಯಾತಿಯಾಗಿತ್ತು.

ಉತ್ತರಪಶ್ಚಿಮ ದಂಡೆತ್ತಿ ಬಂದರೆ ಫ್ರಾನ್ಸಿನಲ್ಲಿರುವ ಎಲ್ಲಾ ಫ್ರೆಂಚರನ್ನೂ ಕಾನ್ಸೆಂಟ್ರೇಷನ್ ಕ್ಯಾಂಪಿಗೆ ಜರ್ಮನರು ಹಾಕಲು ಏರ್ಪಡಿಸುತ್ತಿದ್ದಾರೆ. 16 ರಿಂದ 37 ವರ್ಷ ವಯಸ್ಸಿನ ಗಂಡಸರೆಲ್ಲರೂ ಮೆಡಿಟರೇನಿಯನ್ ಸಮುದ್ರ ತೀರದಿಂದ 50 ಕಿಲೋಮೀಟರ್ ಹೊರಟು ಹೋಗಬೇಕೆಂದು ಈಗಾಗಲೇ ಆಜ್ಞೆಯಾಗಿದೆ.

ಫ್ರಾನ್ಸಿನಲ್ಲಿ ಮತ್ತೆ ರೈಲ್ವೆ ಸಿಬ್ಬಂದಿಗಳ ಮೇಲೆ ಅಮೇರಿಕಾ ವಿಮಾನಗಳು ಧಾಳಿ ಮಾಡಿ 15 ರೈಲ್ವೆ ಇಂಜಿನ್ನುಗಳನ್ನು ನಾಶಮಾಡಿದವು

ಸರ್ಕಾರಿ ನೌಕರರು ಹುದ್ದೆಯಲ್ಲಿ ಅವಿಚಾತುರ್ಯ ಕೆಲಸ ಮಾಡಿದರೆ ಇವರ ಮೇಲೆ ಸ್ವಮುಖರು ಯಾ ಪಕ್ಷಪಾತ ಮೊಖದ್ದಮೆಯನ್ನೂ ಹೂಡಲು ಅವಕಾಶ ಕೊಡದಿರುವ 'ಇಂಡೆಮ್ನಿಟಿ ಆಕ್ಟನ್ನು' ಬಿಹಾರ್, ಸಂಯುಕ್ತ ಪ್ರಾಂತ್ಯಗಳ ಗವರ್ನರುಗಳು ಜಾರಿಗೆ ತಂದಿದ್ದಾರೆ.

ಲಾಹೋರಿನಲ್ಲಿ ಮುಸ್ಲಿಂ ಲೀಗಿನ ಅಧಿವೇಶನವು ನಾಳೆ ಪ್ರಾರಂಭವಾಗುವುದು. ಆ ದಿವಸ 3 ಘಂಟೆಗೆ ಮಿ॥ ಜಿನ್ನಾರವರನ್ನು ಮೆರವಣಿಗೆಯಲ್ಲಿ ಕರೆತರುವರು. ಈಗಾಗಲೇ ೧೦೦೦ ಡೆಲಿಗೇಟ್‌ಗಳು ಬಂದಿರುತ್ತವೆ ಈ ಬೆಳ್ಗಿನಿಂದಲೇ ಕಾರ್ಯ ಕಲಾಪಗಳು ಪ್ರಾರಂಭವಾದುವು ಈ ಅಧಿವೇಶನವು ನಡೆಯುವ ಸ್ಥಳಕ್ಕೆ "ಜಮನಾ—ಇ—ಪಾಕಿಸ್ತಾನ್" ಎಂದು ಹೆಸರು.

ಅಮೆರಿಕ ವೈಮಾನಿಕರನ್ನು ಜಪಾನಿನಲ್ಲಿ ಗಲ್ಲಿಗೇರಿಸಿದ ನಿಮಿತ್ತ ಅಮೆರಿಕನರು ತಾವು ಮುಯ್ಯಿಗೆ ಮುಯ್ಯಿ ತೀರಿಸಿಕೊಳ್ಳುವುದಿಲ್ಲವೆಂದೂ ಜಿನೀವ ಕ್ರಮಕ್ಕೆ ವಿರುದ್ಧ ಪ್ರಕಾರ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ಶಿಕ್ಷೆ ಮಾಡದೆ ಬಿಡುವುದಿಲ್ಲವೆಂದೂ ಪ್ರಕಟಣೆಯಾಗಿದೆ.

## ಭಿಕ್ಷ ಬೇಡುವ ನಾಯಿ

ಲಂಡನ್ನಿನ ಈಸ್ಟ್ ಎಂಡ್ ಸ್ಟೇಷನ್ನಿನಲ್ಲಿ ರೈಲು ಬಂದಾಗ, ಒಂದು ಹೆಣ್ಣಾಳಿನ ಪೆಟ್ಟಿಗೆಯನ್ನು ಬೆನ್ನಿಗೆ ತಗಲಿಸಿಕೊಂಡು ಒಂದು ನಾಯಿಯು ಪ್ರತಿ ಕಂಪಾರ್ಟ್‌ಮೆಂಟಿಗೂ ಹೋಗಿ ಭಿಕ್ಷವನ್ನು ಬೇಡಿಕೊಂಡು ಬರುತ್ತದೆ. ಸುಮಾರು 2½ ವರ್ಷಗಳಿಂದ ಇಂಥಾ ನಾಯಿಗಳು ಈ ಸ್ಟೇಷನ್ನಿಗೆ ಬರುತ್ತಿವೆ

## ರೇಷನಿಂಗ್

ಬೊಂಬಾಯಿನಲ್ಲಿ ರೇಷನಿಂಗ್ ಒರುವ 5 ರಿಂದ ಜಾರಿಗೆ ಒರುವುದು. ಎಲ್ಲರಿಗೂ ಕಾರ್ಡಿನಲ್ಲಿ ಅವರಿಗೆ ಕೊಡಬೇಕಾದ ಆಹಾರ ಸಾಮಗ್ರಿಗಳು ನಮೂದಿಸಿದೆ. ಸರ್ಕಾರಿ ಅಂಗಡಿ 1160 ಇವೆ. ಖಾಸಗಿ 600. ಎಲ್ಲರೂ ಯಾವುದಾದರೂ ಅಂಗಡಿಯಲ್ಲಿ ತಮ್ಮ ಹೆಸರನ್ನು ರಿಜಿಸ್ಟರು ಮಾಡಿಸಿಕೊಳ್ಳಬೇಕು. ಅಲ್ಲಿಯೇ ಅವರಿಗೆ ಸರಕು ಸಿಕ್ಕುವುದು. ಪ್ರತಿ ಅಂಗಡಿಯಲ್ಲಿ 500 ಜನರಿಗಿಂತ ಹೆಚ್ಚಾಗಿ ಕೊಡಲಾಗುವುದಿಲ್ಲ. ವಾರಕ್ಕೆ ಒಬ್ಬರಿಗೆ ಮೂರೂವರೆ ಪೌಂಡು ಮಾತ್ರ ಬ್ರೆಡ್. ಮೇ 2 ರಿಂದ ಯಾರಾ ರೇಷನಿಂಗ್ ಸಂಕುಗಳನ್ನು ಬೊಂಬಾಯಿ ನಗರದ ಹೊರಗೆ ಸಾಗಿಸಕೂಡದು. ವಾರಕ್ಕೆ ಎರಡಾವರ್ತಿ ಸಾಮಾನುಗಳನ್ನು ಕೊಳ್ಳಬಹುದು.

## ಪರೀಕ್ಷೆಗಳನ್ನು ತಗ್ಗಿಸಬೇಕು.

ಕಾಗದದ ಖರ್ಚನ್ನು ತಗ್ಗಿಸಲು ಸಾಧ್ಯವಾಗುವವರೆಗೂ ಪರೀಕ್ಷೆಗಳನ್ನು ತಗ್ಗಿಸಬೇಕೆಂದೂ, ಯುದ್ಧ ಸಮಯದಲ್ಲಿ ಪಠ್ಯ ಪುಸ್ತಕಗಳನ್ನು ಬದಲಾಯಿಸಕೂಡದೆಂದೂ, ಉತ್ತೀರ್ಣರಾದ ವಿದ್ಯಾರ್ಥಿಗಳ ಪುಸ್ತಕಗಳನ್ನು ಕೊಂಡು ಹೊಸ ವಿದ್ಯಾರ್ಥಿಗಳಿಗೆ ಕೊಡಬೇಕೆಂದೂ, ಅನೇಕ ಪಠ್ಯ ಗ್ರಂಥಗಳನ್ನು ಲೈಬ್ರರಿ ಹಾಕಿಸುವ ಅವಶ್ಯಕತೆಯಿಲ್ಲವೆಂದೂ ಟಿಕ್ಸ್‌ಬುಕ್ ಕಮಿಟಿಯವರು ಪ್ರಾವು ಸಿ ಪ್ರಾರಸುನ್ನಾಡುವ ಗ್ರಂಥಗಳ ಸಂಖ್ಯೆಯನ್ನು ತಗ್ಗಿಸಬೇಕೆಂದು ಸೆಂಟ್ರಲ್ ಬೋರ್ಡ್ ಆಫ್ ಎಜುಕೇಷನ್‌ನವರು ರಾಷ್ಟ್ರೀಯ ಸರ್ಕಾರಗಳಿಗೂ ವಿಶ್ವವಿದ್ಯಾನಿಲಯವೇ ಮೊದಲಾದುವುಗಳಿಗೂ ಸಲಹೆಕೊಟ್ಟಿರುವರೆಂದು ತಿಳಿಯಬೇಕಾಗಿದೆ.

## ಭಂಗಾರ ಬೆಳ್ಳಿ ಧಾರಣೆ

| | | |
|---|---|---|
| ಸ್ವರ್ಣ | ರೂ. | 62—4—0 |
| ಒಂಗಾರ ತೊಲ | ರೂ. | 90—0—0 |
| ಬೆಳ್ಳಿ | ,, | 1—4—0 |

## ಎಲ್ಲೆಲ್ಲಿ ಏನೇನು ?

ವೈಸ್ರಾಯಿ ಏಕ್ಸಿಕ್ಯೂಟಿವ್ ಕೌನ್ಸಿಲ್ ಮಿಟಿಂಗು ಮೊನ್ನೆ ನಡೆಯಿತು.

ಅಮೆರಿಕಾದಲ್ಲಿರೇ ಯಾತ್ರಕೆ ಹಿಂದೂ ಸ್ಥಾನದ ವಿಷಯದಲ್ಲಿ ಕೈ ಹಾಕಬೇಕೆಂದು ಶ್ರೀ ಸಿ. ರಾಜಗೋಪಾಲಚಾರಿಯವರು ಮಿ|| ಫಿಲಿಪ್ಸರವರಿಗೆ ಬರೆದಿರುವರು ಇದು ಮಿ||ಸನ್ಸ್ ಅವರಿಗೆ ಹೇಳಿದ್ದಕ್ಕೆ ಉತ್ತರ.

ಲಂಡನ್ನಿನಲ್ಲಿ ಇಂಡಿಯಾ ನಾಷನಲ್ ಮುಸ್ಲಿಂ ಸಮಿತಿಯ ಮಿಟಿಂಗು ನಡೆಯಿತು. ಬಹು ಜನರು ಸೇರಿದ್ದರು. ಮಿ || ಜಿನ್ನಾರವರು ಮುಸ್ಲಿಂರೇ ಇಲ್ಲವೇ. ಇವರು ಮುಸ್ಲಿಮರ ವಕಾಲತ್ತು ವಹಿಸುತ್ತಾರೆಯೇ, ಎಂಬುದಾಗಿ ಚರ್ಚೆಯಾಯಿತು. ಮಿ || ಅಮರ್ ಷಾರವರು ಮುಸಲ್ಮಾನರು ಮೊದಲು ಹಿಂದೂಸ್ಥಾನದವರು ಎಂದರು. ಮಿ || ಅಕ್ಬರ್ ಖಾನ್ ಪಲ್ಲೀಕರು ಜಿನ್ನಾರವರ ಬಾಲವನ್ನು ಮುಸ್ಲಿಂ ಕೆಲಸಗಾರರೂ ರೈತರೂ ಹಿಡಿಯುವುದಿಲ್ಲವೆಂದರು.

### ಶಾಸನ ಸಭಾಧ್ಯಕ್ಷರಿಗೆ ಜುಲ್ಮಾನೆ

ತಮ್ಮ ಮಗಳು 16 ವರ್ಷದವಳನ್ನು ಹದಿನಾರು ವರ್ಷದ ವರನಿಗೆ ಕೊಟ್ಟು ಮದುವೆ ಮಾಡಿದರೆಂದು ಮಧ್ಯ ಪ್ರಾಂತ್ಯದ ಶಾಸನ ಸಭಾಧ್ಯಕ್ಷರಿಗೆ 500 ರೂಪಾಯಿ ಜುಲ್ಮಾನೆಯಾಯಿತು.

ಂ ಂ

### ಭಾರತೀಯರ ವಿರುದ್ಧ ಶಾಸನ,

ನೇಟಾಲ್ ಮತ್ತು ಟ್ರಾನ್ಸ್‌ವಾಲು ಗಳಲ್ಲಿ ಭಾರತೀಯರು ಜಮೀನನ್ನು ಕೊಳ್ಳುವುದನ್ನು ನಿಷೇಧಿಸುವ ಮಸೂದೆಯು 3 ನೆ ಸಲವೂ ಆಫ್ರಿಕಾ ಶಾಸನ ಸಭೆಯಲ್ಲಿ ಅಂಗೀಕೃತವಾಯಿತು. ಪಾರ್ಲಿಮೆಂಟಿನಲ್ಲಿ ಇಂಡಿಯಾ ಸ್ಟೇಟ ಸಕ್ರೆಟರಿ ಮಿ|| ಎಮರಿಯವರು ಈ ಮಸೂದೆಯ ವಿಷಯದಲ್ಲಿ ಯಾವ ಹೇಳಿಕೆಯನ್ನೂ ಕೊಡುವದಿಲ್ಲ, ಇದು ಆಫ್ರಿಕಾಕ್ಕೂ ಇಂಡಿಯಾಕ್ಕೂ ಸಂಬಂಧಪಟ್ಟದ್ದು ಎಂದರು

---

ಮೈಸೂರು ಸಂಸ್ಥಾನದ ರೆವಿನ್ಯೂ ಕಮಿಷನರಾದ ಮಿ || ಮೇಕ್ರಿಯವರು 6 ತಿಂಗಳು ಕಿರಜಾಕ್ಕೆ ಅರ್ಜಿ ಬರೆದು ಕೊಂಡಿರುವೆಂಬ ಸುದ್ದಿ ತಿಳಿಯುಬಂದಿದೆ.

## ವರ್ತಮಾನ

ಸ್ಕಾಟ್ಲೆಂಡಿನ ಅಗ್ನೇಯದಲ್ಲಿ ಶತ್ರು ಧಾಳಿಯಾಗಿ ಸ್ವಲ್ಪ ನಷ್ಟವಾಯಿತು. ಸಾವು ಹೆಚ್ಚಾಗಿರಬಹುದೆಂದು ಊಹಿಸಲಾಗಿದೆ. ಇಂಥಾ ಧಾಳಿ ಇಲ್ಲಿ ಇದವರೆಗೆ ಆಗಿರಲಿಲ್ಲವಂತೆ.

ಂ ಂ

1942 ಲ್ಲಿ ಅಮೆರಿಕಾದವರೂ ಬ್ರಿಟಿಷರೂ ಒಟ್ಟಿಗೆ ತಯಾರುಮಾಡಿರುವುದಕ್ಕಿಂತ ಹೆಚ್ಚಾಗಿ ಶತ್ರುಗಳು ನೌಕೆಗಳನ್ನು ಮುಳುಗಿಸಿರುವರು ಅಂದರೆ ೧ ಕೋಟಿ ೨೦ ಲಕ್ಷ ಟನ್‌ಗೆ ಸಾರಿ ಹಡಗುಗಳು ಮುಳುಗಿಹೋದವೆಂದು ಟ್ರೂನು ಸಾಕಪಿಟಿಯವರು ಈಗ ತಾನೆ ಘರ್ಜಿಯನ್ನು ಒಪ್ಪಿಸಿರುತ್ತಾರೆ.

ಂ ಂ

ಆರ್ಚ್ ಬಿಷಪ್ ಸ್ಟೆಲ್‌ವನ್‌ರವರು ಈಗ ಜೆರುಸಲೇವಿಗೆ ಬಂದಿರುತ್ತಾರೆ. ಅಲ್ಲಿಂದ ಇಂಡಿಯಾಕ್ಕೂ ಆಮೇಲೆ ಚೈನಾಕ್ಕೂ ಬರುವರು.

ಂ ಂ

ಅಮೆರಿಕಾ ಮಿಲಿಟರಿ ಮುಖ್ಯ ಆಫೀಸರು ಜಪಾನರು ಕಾಲ ವಿಳಂಬ ಮಾಡಿಕೊಂಡು ಕಚ್ಚಾ ಪದಾರ್ಥಗಳನ್ನು ಶೇಖರಿಸಿ ಯುದ್ಧೋಪಕರಣಗಳನ್ನು ತಯಾರು ಮಾಡುವರೆಂದೂ, ತಾವು ಈಗ-ಗೆದ್ದ ಪ್ರದೇಶಗಳನ್ನು ಭದ್ರಪಡಿಸುವುದೇ ಸಾಕಾಗಿದೆಯೆಂದೂ, ಇನ್ನು ಮುಂದೆ ತಾವಾಗಿ ಮುಂದೆ ನುಗ್ಗಲಾರರೆಂದೂ ಅದಕ್ಕಾಗಿ ಮಿತ್ರ ಪಕ್ಷದವರು ಬರ್ಮಾ ಚೈನಾದ ಮೇಲೆ ನುಗ್ಗಬೇಕೆಂದರು

ಂ ಂ

ಹಿಂದೂಸ್ಥಾನವು ಪ್ರಪಂಚದಲ್ಲಿ ಒಂದು ಭಾಗದಂತೆ ಸಮಸ್ಯೆ ಪರಿಹರಿಸಬೇಕು ಮಿ || ಫಿಲಿಪ್ಸರ. ಈಗ ಸ್ವದೇಶಕ್ಕೆ ಹಿಂದಿರುಗುತ್ತಾರೆ. ಮಿ|| ಫಿಲಿಪ್ಸರು ಮಿ|| ರೂಸ್‌ವೆಲ್ಟರು ಕಣ್ಣು ಕಿವಿ ಎಲ್ಲಾ. ಇವರು ಅರ್ಧಂಭರ್ಧ ಇಂಡಿಯಾ ವಿಷಯ ಪ್ರೆಸಿಡೆಂಟರಿಗೆ ವರಿಕೆಮಾಡಬಾರದು. ಹಿಂದೂಸ್ಥಾನದವರಿಗೂ ಬ್ರಿಟಿಷರಿಗೂ ಇರುವ ಬಾಂಧವ್ಯವನ್ನು ಸರಿಯಾಗಿ ಬಿಚ್ಚಿ ಹೇಳಬೇಕು. ಇದು ಯುದ್ಧ ನಂತರ ಪ್ರಾಬ್ಲಮ್ ಮಾತ್ರ ಪ್ರಪಂಚದ ಸಮಸ್ಯೆಯಾಗಿರುವುದೆಂದು ಅಮೆರಿಕಾದ ಮಿ|| ಫಿಲಿಪ್ಸರು ಹೇಳುವರು.


**The Satyavadi Press**

Printers & Binders

Chamarajapuram

Mysore

---

**ಶ್ರೀದೇವಿ ಆರ್ಟ್ಸ್**

ಬಿಂದವಾದ ಬೋರ್ಡ್‌ಗೆಳು ಒಳಯಲಿ ಡುತ್ತವೆ. ಎಲ್ಲಾ ತರಹದ ಚಿತ್ರಕೆಲಸಗಳೂ ಮಾಡಲ್ಪಡುತ್ತವೆ ಸುಲಭ ದರಗಳು. 438 ಚಾಮರಾಜರೋಡ್, ಮೈಸೂರು

---

**ಬೇಕಾಗಿದೆ**

ಸಂಯಾದ ಸ್ಥಿತಿಯಲ್ಲಿರುವ ಸೆಕೆಂಡ್ ಹ್ಯಾಂಡ್ ಬೈಸಿಕಲ್‌ಗಳು ಬೇಕಾಗಿವೆ. ವಿವರಗಳಿಗೆ ಕೆಳಗಿರುವ ಅಡ್ರೆಸ್ಸಿಗೆ ಬಂದು ವಿಚಾರಿಸಿರಿ.

ಸತ್ಯವಾದಿ ಆಫೀಸ್,
ಚಾಮರಾಜಪುರಂ, ಮೈಸೂರು.

---

**Opera — Manonmani**

**ಅಪೆರಾ**

**ಹೊಸ ಅಮೋಘ ಪಾರ**

ಪಿ.ಯು.ಚಿನ್ನಪ್ಪ, ಟಿ.ಆರ್.ರಾಜಕುಮಾರಿ ಶ್ಯಾಮ, ಮಹಾಲಿಂಗಂ, ಕೆ.ಕೆ. ಪೆರುಮಾಳ್, ಎನ್. ಎಸಕೃಷ್ಣಟಿ.ಎ. ಮಧುರಾ, ಕಾಳಿ ಎಸ್. ರತ್ನಂ, ಮುಂತಾದವರು ಪಾತ್ರ ವಹಿಸಿರುವ

**ಮನೋನ್ಮಣಿ**

**ಮನಮೋಹನ**

**ಸಾಂಘಿಕ ಚಿತ್ರ**

---

**ಶಕ್ತಿ ಸಾಧನೆಗೆ ಸುಲಭೋಪಾಯವು**

**ಶಕ್ತಿ ಸುಧಾ**

ಸೇವನೆ ಎಂಬುವುದು
ನಿಮ್ಮ ಜ್ಞಾಪಕದಲ್ಲಿರಲಿ

**SHAKTI SUDHA**

**A Panacea for All Debilites**

**ಬೇಕಾಗಿದಾರೆ**

ಮೈಸೂರಿನ ಎಲ್ಲಾ ಕಡೆಗಳಲ್ಲಿಯೂ ಪತ್ರಿಕೆಯನ್ನು ಮಾರಲೂ, ಚಂದಾದಾರರಿಗೆ ಕೊಡಲೂ ಕೆಲವರು ಬೇಕಾಗಿದ್ದಾರೆ.

ಹೆಚ್ಚಿ ವಿಷಯಗಳನ್ನು ಮೊಖ್ತಾ ವಿಚಾರಿಸಿ ತಿಳಿಯಬಹುದು

ಮ್ಯಾನೇಜರ್, ಸತ್ಯವಾದಿ ಪ್ರೆಸ್
ಚಾಮರಾಜಪುರಂ, ಮೈಸೂರು.

---

**ಅಕ್ಕರ** ಸಾಮಾಜಿಕ ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್ ಮೈಸೂರು
ಶ್ರೀ ರಾಮಚಂದ್ರ ಬುಕ್ ಡಿಪೋ
ದೇವರಾಜ ಮಾರ್ಕೆಟ್, ಮೈಸೂರು

---

**For good printing**
**Saraswati Printing Press**
Lansdowne Buildings, Mysore
**Lakshminarasimha Press**
Srirampet, Mysore

---

**ಪಿ. ಮಂಜಪ್ಪ** ಪುರ್ಚಿಂಟ್
ಮಂಗಳೂರು ಗಣಪತಿ, ಸುವರ್ಣಾ ಗಜಾನನ ಬಿರುದಿಗಳನ್ನೆ ಉಪಯೋಗಿಸಿ
ಹಳೇ ಅಗ್ರಹಾರ, ಮೈಸೂರು.

---

**ಸತ್ಯವಾದಿ ಪತ್ರಿಕೆಗೆ ಚಂದಾದಾರರಾಗಿರಿ**


---

Edited, Printed & published by M. S. Krishna Rao, at the Satyavadi Press. Chamaraja Agrahar, Mysore.